# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 1130

**ಸದಸ್ಯರ ಹೆಸರು :** ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

**ಉತ್ತರಿಸುವ ದಿನಾಂಕ :** 23.02.2024

**ಉತ್ತರಿಸುವ ಸಚಿವರು :** ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಗ್ಯಾಜೇಟಿಯರ್ ಇಲಾಖೆಯಿಂದ ಪ್ರಕಟಿಸಲಾಗುವ "ಕರ್ನಾಟಕ ಕೈಪಿಡಿ" (A hand Book of Karnataka) ಭಾಗ-1 ಮತ್ತು ಭಾಗ-2 ರ ಕನ್ನಡ ಹಾಗೂ ಆಂಗ್ಲ ಆವೃತ್ತಿಯ ಪುಸ್ತಕವನ್ನು ಯಾವ ಯಾವ ವರ್ಷದಂದು ಪ್ರಕಟಿಸಲಾಗಿದೆ; | ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಿಂದ "ಕರ್ನಾಟಕ ಕೈಪಿಡಿ" ಭಾಗ-1 ಮತ್ತು ಭಾಗ-2 ರ ಕನ್ನಡ ಆವೃತ್ತಿಯ ಪುಸ್ತಕವನ್ನು 2018 ರಲ್ಲಿ ಪ್ರಕಟಿಸಲಾಗಿದೆ.<br><br>"A hand Book of Karnataka" ಸಂಪುಟದ ಆಂಗ್ಲ ಭಾಷೆಯ ಆವೃತ್ತಿಯನ್ನು 2020ರಲ್ಲಿ ಪರಿಷ್ಕರಿಸಿ ಪ್ರಕಟಿಸಲಾಗಿದೆ. |
| (ಆ) | 2022-23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಪರಿಷ್ಕೃತ ಕನ್ನಡ ಆವೃತ್ತಿಯನ್ನು ಪ್ರಕಟಿಸಲು ಉದ್ದೇಶಿಸಿದ್ದರೂ ಇದುವರೆಗೂ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪರಿಷ್ಕೃತ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ "ಕರ್ನಾಟಕ ಕೈಪಿಡಿ" ಪುಸ್ತಕಗಳನ್ನು ತಯಾರಿಸಲು ತಜ್ಞರು ಲಭ್ಯವಾಗುತ್ತಿಲ್ಲವೇ; ಈ ಕುರಿತು ಮಾಹಿತಿಯನ್ನು ನೀಡುವುದು. | ಅನುಬಂಧ-1ರಲ್ಲಿ ಒದಗಿಸಿದೆ. |
| ಇ) | ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಆವೃತ್ತಿಗಳನ್ನು ಪ್ರಕಟಿಸಲು ಉದ್ದೇಶಿಸಿರುವ ಕ್ರಿಯಾ ಯೋಜನೆಯ ಕುರಿತು ಮತ್ತು ಮೀಸಲಿಟ್ಟ ಅನುದಾನದ ಕುರಿತು; (ವಿವರ ನೀಡುವುದು) | ಕರ್ನಾಟಕ ಕೈಪಿಡಿ ಸಂಪುಟವನ್ನು 2023-24ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಮುಂದುವರೆದ ಯೋಜನೆಯಾಗಿ ಮುಂದುವರೆಸಿದೆ.<br>2023-24ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಕರ್ನಾಟಕ ಕೈಪಿಡಿ ಸಂಪುಟದ ಪರಿಷ್ಕರಣೆಗೆ ರೂ.2.63 ಲಕ್ಷಗಳನ್ನು ಮೀಸಲಿಡಲಾಗಿದೆ. |

...2

| | | |
|---|---|---|
| ಈ) | ಯಾವ ಕಾಲಮಿತಿಯಲ್ಲಿ ಪರಿಷ್ಕೃತ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ "ಕರ್ನಾಟಕ ಕೈಪಿಡಿ" ಮತ್ತು "A Hand Book of Karnataka" ಪುಸ್ತಕವನ್ನು ಪ್ರಕಟಿಸಲಾಗುವುದು ಸ್ಪಷ್ಟನೆಯನ್ನು ನೀಡುವುದು; | ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಸಂಪಾದಕೀಯ ವೃಂದದಲ್ಲಿ (ಸಂಪಾದಕರು ಮತ್ತು ಅನ್ವೇಷಕರು) ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಯೋನಿವೃತ್ತಿಯಿಂದ ಹುದ್ದೆಗಳು ಖಾಲಿ ಇರುವುದರಿಂದ, ಹೊರಗುತ್ತಿಗೆ ಲೇಖಕರನ್ನು ಗುರುತಿಸಿ ಅವರಿಗೆ ಅಧ್ಯಾಯಗಳನ್ನು ರಚಿಸಲು ನೀಡಲಾಗಿದೆ. ಅದರಲ್ಲಿ ಕೆಲವು ಅಧ್ಯಾಯಗಳು ಕಚೇರಿಯಲ್ಲಿ ಸ್ವೀಕೃತವಾಗಿದ್ದು, ಅವುಗಳನ್ನು ಪರಿಶೀಲಿಸಲಾಗುತ್ತಿದೆ. ಉಳಿದ ಅಧ್ಯಾಯಗಳು ಸ್ವೀಕೃತವಾದ ನಂತರ, ಅವುಗಳನ್ನು ಪರಿಶೀಲಿಸಿ, ಸಂಪಾದಿಸಿ, ಸಂಪುಟವನ್ನು ಪ್ರಕಟಿಸಲಾಗುವುದು.<br><br>A Hand Book of Karnataka ಸಂಪುಟವನ್ನು ಈಗಾಗಲೇ 2020ರಲ್ಲಿ ಆಂಗ್ಲ ಭಾಷೆಯಲ್ಲಿ ಪರಿಷ್ಕರಿಸಿ ಪ್ರಕಟಿಸಲಾಗಿದೆ. |
| ಉ) | ಕರ್ನಾಟಕ ಗ್ಯಾಜೆಟಿಯರ್ ಇಲಾಖೆಯಿಂದ ಪ್ರಕಟಿಸಲಾಗುತ್ತಿರುವ ವಿವಿಧ ಪುಸ್ತಕಗಳು ಯಾವುವು; ಅವುಗಳಿಗೆ ನಿಗದಿಪಡಿಸಿದ ದರಗಳ ಸಮೇತ ಪುಸ್ತಕಗಳ ಪಟ್ಟಿಯನ್ನು ನೀಡುವುದು? | ಅನುಬಂಧ-2ರಲ್ಲಿ ಒದಗಿಸಿದೆ. |

**ಸಂಖ್ಯೆ**.ಕಸಂವಾ 21 ಕೆಓಎಲ್ ಆಕ 2024

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

# ಅನುಬಂಧ-1

ಕರ್ನಾಟಕ ಕೈಪಿಡಿ ಮತ್ತು A Hand Book of Karnataka ಸಂಪುಟಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ 5 ವರ್ಷಗಳಿಗೊಮ್ಮೆ ಪರಿಷ್ಕರಿಸಿ ಪ್ರಕಟಿಸಲಾಗುವುದು.

A Hand Book of Karnataka – ಇಲಾಖೆಯು ಈಗಾಗಲೇ 2020ರಲ್ಲಿ ಸಂಪುಟವನ್ನು ಆಂಗ್ಲ ಭಾಷೆಯಲ್ಲಿ ಪರಿಷ್ಕರಿಸಿ ಪ್ರಕಟಿಸಿದೆ.

2022-23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಪರಿಷ್ಕೃತ ಕರ್ನಾಟಕ ಕೈಪಿಡಿ ಸಂಪುಟವನ್ನು ಪ್ರಕಟಿಸಲು ಹಮ್ಮಿಕೊಳ್ಳಲಾಗಿತ್ತು. ಕೊರೊನಾ ವ್ಯಾಪಕವಾಗಿ ಹರಡಿದ್ದರಿಂದ ಕ್ರಿಯಾಯೋಜನೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ದಾವಣಗೆರೆ ಜಿಲ್ಲೆಯ 1) ಜಗಳೂರು, 2) ಚನ್ನಗಿರಿ ಮತ್ತು 3) ಹೊನ್ನಾಳಿ ಹಾಗೂ ಕೊಪ್ಪಳ ಜಿಲ್ಲೆಯ 4) ಕುಷ್ಟಗಿ, 5) ಗಂಗಾವತಿ, 6) ಕೊಪ್ಪಳ ಮತ್ತು 7)ಯಲಬುರ್ಗಾ ಒಟ್ಟು ಏಳು ತಾಲ್ಲೂಕು ಗ್ಯಾಸೆಟಿಯರ್ ಸಂಪುಟಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗದೇ ಇದ್ದುದರಿಂದ ಕರ್ನಾಟಕ ಕೈಪಿಡಿಯ ಪರಿಷ್ಕರಣೆ ಕಾರ್ಯವನ್ನು ಮುಂದೂಡಲಾಯಿತು.

2022-23ನೇ ಸಾಲಿನಲ್ಲಿ ಇಲಾಖೆಯು 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ ಹಿನ್ನೆಲೆಯಲ್ಲಿ ವಿಶೇಷ ಯೋಜನೆಯಡಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಗ್ಯಾಸೆಟಿಯರ್ ಸಂಪುಟವನ್ನು ಪ್ರಕಟಿಸಿ ಹೊರತಂದಿರುತ್ತದೆ.

ದಿನಾಂಕ:09.06.2021 ರಂದು ಸರ್ಕಾರವು ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯೊಂದಿಗೆ ವಿಲೀನಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ. ಎರಡು ಇಲಾಖೆಗಳ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸಂಬಂಧಿಸಿದಂತೆ, ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ಹೊರಗುತ್ತಿಗೆ ಲೇಖಕರನ್ನು ಗುರುತಿಸಿ ಅವರಿಗೆ ಅಧ್ಯಾಯಗಳನ್ನು ರಚಿಸಲು ನೀಡಲಾಗಿದೆ. ಅದರಲ್ಲಿ ಕೆಲವು ಅಧ್ಯಾಯಗಳು ಕಛೇರಿಗೆ ಸ್ವೀಕೃತವಾಗಿರುತ್ತವೆ. ಕೆಲವು ಅಧ್ಯಾಯಗಳನ್ನು ವೈಯಕ್ತಿಕ ಕಾರಣಗಳಿಂದ ರಚಿಸಲು ಸಾಧ್ಯವಿಲ್ಲವೆಂದು ಹೊರಗುತ್ತಿಗೆ ಲೇಖಕರು ತಿಳಿಸಿರುತ್ತಾರೆ. ಪುನ: ಹೊರಗುತ್ತಿಗೆ ಲೇಖಕರನ್ನು ಗುರುತಿಸಿ ಸದರಿ ಅಧ್ಯಾಯಗಳನ್ನು ರಚಿಸಲು ನೀಡಲಾಗಿದೆ. ಕಚೇರಿಯಲ್ಲಿ ಸ್ವೀಕೃತವಾದ ಅಧ್ಯಾಯಗಳನ್ನು ಪರಿಶೀಲಿಸಲಾಗುತ್ತಿದೆ. ಉಳಿದ ಅಧ್ಯಾಯಗಳು ಕಚೇರಿಯಲ್ಲಿ ಸ್ವೀಕೃತವಾದ ನಂತರ ಸದರಿ ಅಧ್ಯಾಯಗಳನ್ನು ಪರಿಶೀಲಿಸಿ, ಸಂಪಾದಿಸಿ, ಸಂಪುಟವನ್ನು ಪ್ರಕಟಿಸಲಾಗುವುದು.

ಇಲಾಖೆಯ ಸಂಪಾದಕೀಯ ವೃಂದದಲ್ಲಿ (ಸಂಪಾದಕರು ಮತ್ತು ಅನ್ವೇಷಕರು) ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಯೋನಿವೃತ್ತಿಯಿಂದಾಗಿ ಎಲ್ಲಾ ಹುದ್ದೆಗಳು ಖಾಲಿ ಇರುತ್ತವೆ.

ಕರ್ನಾಟಕ ಕೈಪಿಡಿ ಸಂಪುಟವನ್ನು 2023-24ನೇ ಸಾಲಿ ಕ್ರಿಯಾಯೋಜನೆಯಲ್ಲಿ ಮುಂದುವರೆದ ಯೋಜನೆಯಾಗಿ ಮುಂದುವರೆಸಿದೆ.

ಮುಂಬರುವ ದಿನಗಳಲ್ಲಿ ಕರ್ನಾಟಕ ಕೈಪಿಡಿ ಸಂಪುಟಗಳನ್ನು ಶೀಘ್ರವಾಗಿ ಹೊರತರಲು ಕ್ರಮವಹಿಸಲಾಗುವುದು.

ಕೆ.ಆರ್. ರಮೇಶ

**ಸರ್ಕಾರದ ಅಧೀನ ಕಾರ್ಯದರ್ಶಿ**
**ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ**
**(ಆಡಳಿತ ಕನ್ನಡ ಮತ್ತು ಸಮನ್ವಯ)**

(ಉ) ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಿಂದ ಪ್ರಕಟಿಸಲಾಗುತ್ತಿರುವ ವಿವಿಧ ಪುಸ್ತಕಗಳು ಯಾವುವು; ಅವುಗಳಿಗೆ ನಿಗದಿಪಡಿಸಿರುವ ದರಗಳ ಸಮೇತ ಪುಸ್ತಕಗಳ ಪಟ್ಟಿಯನ್ನು ನೀಡುವುದು?

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ಪ್ರಕಟಿಸಿರುವ ಗ್ಯಾಸೆಟಿಯರ್ ಸಂಪುಟಗಳ ಪಟ್ಟಿ

| ಪ್ರಕಟಣೆಯ ಹೆಸರು | ಭಾಷೆ | ಪ್ರಕಟಣೆಯ ವರ್ಷ | ಬೆಲೆ |
|---|---|---|---|
| ಧಾರವಾಡ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1959 | – |
| ಕೂರ್ಗ್ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1965 | – |
| ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1966 | 15 |
| ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1967 | 15 |
| ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1967 | – |
| ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1968 | – |
| ಕೋಲಾರ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1968 | 20 |
| ತುಮಕೂರು ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1969 | – |
| ರಾಯಚೂರು ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1970 | 30 |
| ಹಾಸನ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1971 | 40 |
| ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1972 | 42 |
| ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1973 | – |
| ಶಿವಮೊಗ್ಗ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1976 | – |
| ಬೀದರ್ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1977 | 61 |
| ಚಿಕ್ಕಮಗಳೂರು ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1981 | – |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ 1 | ಆಂಗ್ಲ | 1982 | |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ 2 | ಆಂಗ್ಲ | 1983 | 120 |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ 1 | ಕನ್ನಡ | 1984 | |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ 2 | ಕನ್ನಡ | 1985 | 120 |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ 3 | ಕನ್ನಡ | 1986 | |
| ಉತ್ತರ ಕನ್ನಡ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1985 | 75 |
| ಬೆಳಗಾವಿ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1987 | 75 |
| ಮೈಸೂರು ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1988 | 75 |
| ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1989 | 75 |
| ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1990 | 100 |
| ಕೊಡಗು ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 1992 | 100 |
| ಕೊಡಗು ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 1993 | – |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ದಶವಾರ್ಷಿಕ ಪುರವಣಿ (Supplement) | ಆಂಗ್ಲ | 1994 | 130 |
| ಧಾರವಾಡ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 1995 | 175 |
| ಹ್ಯಾಂಡ್ ಬುಕ್ ಆಫ್ ಕರ್ನಾಟಕ | ಆಂಗ್ಲ | 1996 | 100 |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ದಶವಾರ್ಷಿಕ ಪುರವಣಿ | ಕನ್ನಡ | 1996 | 181 |
| ಕರ್ನಾಟಕ ಕೈಪಿಡಿ | ಕನ್ನಡ | 1996 | 116 |
| ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 1997 | 200 |
| ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 1999 | 242 |
| ಹ್ಯಾಂಡ್ ಬುಕ್ ಆಫ್ ಕರ್ನಾಟಕ | ಆಂಗ್ಲ | 2001 | 160 |
| ಬಿಜಾಪುರ 1884 ಪುನರ್ ಮುದ್ರಣ (ಜೇಮ್ಸ್ ಎಂ.ಕ್ಯಾಂಬೆಲ್) | ಆಂಗ್ಲ | 2001 | 330 |
| ಧಾರವಾಡ ಜಿಲ್ಲಾ ಗ್ಯಾಸೆಟಿಯರ್– ಭಾಷಾಂತರ | ಆಂಗ್ಲ | 2003 | 350 |
| ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 2003 | 250 |
| ಧಾರವಾಡ 1884 ಪುನರ್ ಮುದ್ರಣ (ಜೇಮ್ಸ್ ಎಂ.ಕ್ಯಾಂಬೆಲ್) | ಆಂಗ್ಲ | 2003 | 235 |
| ದಕ್ಷಿಣ ಕನ್ನಡ 1884 ಪುನರ್ ಮುದ್ರಣ (ಸ್ಟುರ್ರೋಕ್) | ಆಂಗ್ಲ | 2003 | 170 |
| ಕೆನರಾ 1884 ಪುನರ್ ಮುದ್ರಣ (ಜೇಮ್ಸ್ ಎಂ.ಕ್ಯಾಂಬೆಲ್) | ಆಂಗ್ಲ | 2003 | 250 |
| ಬೆಳಗಾವಿ 1884 ಪುನರ್ ಮುದ್ರಣ (ಜೇಮ್ಸ್ ಎಂ.ಕ್ಯಾಂಬೆಲ್) | ಆಂಗ್ಲ | 2004 | 250 |

| | | | |
|---|---|---|---|
| ಬಳ್ಳಾರಿ 1872/1904 ಪುನರ್ ಮುದ್ರಣ (ಜಾನ್ ಕೆಲ್ಸಾಲ್ /ಡಬ್ಲ್ಯೂ ಫ್ರಾನ್ಸಿಸ್) | ಆಂಗ್ಲ | 2004 | 160 |
| ಮೈಸೂರು ಮತ್ತು ಕೂರ್ಗ್ ಭಾಗ 1, ಭಾಗ 2 ಮತ್ತು ಭಾಗ 3 (1898) | ಆಂಗ್ಲ | 2004 | 815 |
| ಹ್ಯಾಂಡ್ ಬುಕ್ ಆಫ್ ಕರ್ನಾಟಕ 2005 | ಆಂಗ್ಲ | 2005 | 200 |
| ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್ ಭಾಷಾಂತರ | ಆಂಗ್ಲ | 2005 | 450 |
| ಕೋಲಾರ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 2005 | 280 |
| ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್ ಭಾಷಾಂತರ | ಆಂಗ್ಲ | 2007 | 520 |
| ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 2007 | 290 |
| ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಭಾಷಾಂತರ | ಆಂಗ್ಲ | 2009 | 700 |
| ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ 2010 | ಆಂಗ್ಲ | 2010 | 350 |
| ಮೈಸೂರು ಜಿಲ್ಲೆಯ ಏಳು ತಾಲ್ಲೂಕು ಗ್ಯಾಸೆಟಿಯರ್‌ಗಳು | ಕನ್ನಡ | 2011 | 840 |
| ಕರ್ನಾಟಕ ಕೈಪಿಡಿ 2011 | ಕನ್ನಡ | 2011 | 450 |
| ಉಡುಪಿ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 2011 | 422 |
| A Journey from Madras through the countries of Mysore, Canara & Malabar - (3 Volumes) Sir Francis Buchanan | ಕನ್ನಡ | 2010 | 1230 |
| ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 2011 | 880 |
| ಕರ್ನಾಟಕ ಕೈಪಿಡಿ 2012 | ಕನ್ನಡ | 2012 | |
| ಮೈಸೂರು ಗ್ಯಾಸೆಟಿಯರ್ ಮರು ಮುದ್ರಣ 9 ಸಂಪುಟಗಳು ಸಿ.ಹಯವದನರಾವ್ | ಆಂಗ್ಲ | 2012 | 3800 |
| ಇಂಪಿರಿಯಲ್ ಗ್ಯಾಸೆಟಿಯರ್ (ಬೀದರ್, ಗುಲಬರ್ಗ ಮತ್ತು ರಾಯಚೂರ) (3 ಸಂಪುಟಗಳು – ಒಂದು ಸಂಪುಟಕ್ಕೆ 300 ರೂ.) | ಆಂಗ್ಲ | 2012 | 300 |
| ಕೋಲಾರ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 2012 | 700 |
| ಉಡುಪಿ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 2012 | 550 |
| ಗ್ಲಿಂಪ್ಸಸ್ ಆಫ್ ಕರ್ನಾಟಕ | ಆಂಗ್ಲ | 2012 | 300 |
| ಟಿಪ್ಪು ಸುಲ್ತಾನ – ಎ ಕ್ರುಸೇಡರ್ ಫಾರ್ ಚೇಂಜ್ | ಆಂಗ್ಲ | 2012 | 650 |
| ಕರ್ನಾಟಕ ಮಿನುಗು ನೋಟ | ಕನ್ನಡ | 2013 | 450 |
| ಹ್ಯಾಂಡ್ ಬುಕ್ ಆಫ್ ಕರ್ನಾಟಕ | ಆಂಗ್ಲ | 2015 | 650 |
| ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 2015 | 700 |
| ತುಮಕೂರು ಜಿಲ್ಲಾ ಗ್ಯಾಸೆಟಿಯರ್ | ಕನ್ನಡ | 2017 | 350 |
| ಹಿಸ್ಟರಿ ಆಫ್ ಮೈಸೂರು (ಮರು ಮುದ್ರಣ) (3 ಸಂಪುಟಗಳು- 4 ಪುಸ್ತಕಗಳು) | ಆಂಗ್ಲ | 2017 | 1250 |
| ಕರ್ನಾಟಕ ಕೈಪಿಡಿ | ಕನ್ನಡ | 2017 | 500 |
| Historical Sketches of the South of India in an attempt to trace the History of Mysore (by Mark Wilks) Edited by Murray Hammick (ಮರುಮುದ್ರಣ) | ಆಂಗ್ಲ | 2018 | 900 |
| 'Karnataka through the Ages Edited by R R Diwakar' (ಮರುಮುದ್ರಣ) | ಆಂಗ್ಲ | 2018 | 700 |
| ಕರ್ನಾಟಕ ಕೈಪಿಡಿ ಪುನರ್ ಮುದ್ರಣ ಭಾಗ 1 ಮತ್ತು 2 | ಕನ್ನಡ | 2018 | 500 |
| ಬೀದರ್ ಜಿಲ್ಲಾ ಗ್ಯಾಸೆಟಿಯರ್ | ಆಂಗ್ಲ | 2019 | 650 |
| ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ, ಹರಪನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಹೊಸದುರ್ಗ ಹಾಗೂ ಹೊಳಲ್ಕೆರೆ ತಾಲ್ಲೂಕು ಗ್ಯಾಸೆಟಿಯರ್‌ಗಳು | ಕನ್ನಡ | 2019 | 110 ಒಂದು ಪ್ರತಿಗೆ |
| ಹ್ಯಾಂಡ್ ಬುಕ್ ಆಫ್ ಕರ್ನಾಟಕ | ಆಂಗ್ಲ | 2020 | 650 |
| ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಮತ್ತು ಜಗಳೂರು ಹಾಗೂ ಕೊಪ್ಪಳ ಜಿಲ್ಲೆಯ ಕುಷ್ಟಗಿ, ಗಂಗಾವತಿ, ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕು ಗ್ಯಾಸೆಟಿಯರ್‌ಗಳು | ಕನ್ನಡ | 2022 | 550 ಪ್ರತಿ ಸಂಪುಟಕ್ಕೆ |
| ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಗ್ಯಾಸೆಟಿಯರ್ | ಕನ್ನಡ | 2023 | 640 |

ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್
ಬೆಂಗಳೂರು.